# ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಚಿತ್ತಾಪೂರ

**ಅಸಲು ದಾವಾ ನಂಃ 185/2023**
**ಪಿ .ಡಬ್ಲ್ಯೂಃ2 ,**

**ದಿನಾಂಕ :22-06-2026ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲುಃ ಶ್ರೀ ಎಸ್ ಪಿ ಎಸ್ ವಕೀಲರಿಂದಃ**

ನಾನು ಬಿ ಎ ಪಧವಿದರ. ನಾನು ಕೃಷಿ ಮಾಡುತ್ತೇನೆ. ನನಗೆ ಆರು ಎಕರೆ ಜಮೀನು ಇದೆ. ಬಳಹ ಪ್ರಕರಣದಲ್ಲಿ ಸಾಕ್ಷಿ ನುಡಿದಿದ್ದೇನೆ. 5 - 6 ಕೇಸುಗಳಲ್ಲಿ ಸಾಕ್ಷಿ ನುಡಿದಿದ್ದೇನೆ. ಯಾವುದೇ ವಿಷಯದಲ್ಲಿ ನನ್ನ ಹೆಸರು ತೇಗೆದುಕೊಂಡಿದ್ದರೆ ನಾನು ಸಾಕ್ಷಿ ನುಡಿಯುತ್ತೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದ ವಿಷಗಳು ಗೊತ್ತು. ಇಂಗ್ಲೀಷ್ ನಲ್ಲಿ ಇದ್ದ ವಿಷಯವನ್ನು ಕನ್ನಡದಲ್ಲಿ ತರ್ಜುಮೆ ಮಾಡಿ ತಿಳಿಸಿರುತ್ತಾರೆ. ವಾದಿಯವರ ಕುಟುಂಬದಲ್ಲಿ ಸಾಯಿಬಣ್ಣ, ಸಾಯಿಬಣ್ಣ ಮಕ್ಕಳಾದ ಅಶೋಕ್ ಸೀನಪ್ಪ ತೀರಿಹೋಗಿದ್ದಾರೆ. ಸರ್ವೆ ನಂ.400 ನಲ್ಲಿ 9 ಎಕರೆ ಚಿಲ್ಲರ್ ಗುಂಟೆ ಇದೆ, ಸರ್ವೆ ನಂ. 385 ರಲ್ಲಿ 14 ಎಕರೆ ಚಿಲ್ಲರೆ ಗುಂಟೆ ಇದೆ, ಸರ್ವೆ ನಂ. 19 ರಲ್ಲಿ 3 ಎಕರೆ 24 ಗುಂಟೆ ಅದು ಮಾರಾಟವಾಗಿದೆ. ವಾದಿಯವರ ಸಮಾಜ ಬೇರೆ ಮತ್ತು ನಮ್ಮ ಸಮಾಜ ಬೇರೆ. ಅವರ ಸಮಾಜದಲ್ಲಿ 200 ರಿಂದ 300 ಮನೆಗಳು ಇವೆ ಎಂದರೆ ಸರಿ. ವಾದಿಯರ ಸಮಾಜದಲ್ಲಿ 200 ರಿಂ 300 ಮನೆಗಳು ಇದ್ದು ಯಾರು ಬಂದು ಸಾಕ್ಷಿನುಡಿಯಲು ತಯಾರು ಇಲ್ಲ ಎಂದರೆ ಸಾಕ್ಷಿ ನಾನು 2 ರಿಂದ 3 ಭಾರಿ ಪಂಚಾಯಿತಿ ಮಾಡಿದ ಕಾರಣ ನಾನು ಬಂದು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ನುಡಿಯುತ್ತಾರೆ. ನಾನು ಮಾಡಿದ ಪಂಚಾಯಿತಿ ಅವರ ಸಮಾಜದವರು ಯಾರು ಇರಲಿಲ್ಲ. ವಾದಿಯವರ ತಂದೆ ತೀರಿಹೋಗಿ 20 ವರ್ಷ ಆಗಿದೆ, ತಾಯಿ ತೀರಿಹೋಗಿ 5 ವರ್ಷ ಆಗಿದೆ. ಅವರ ಮರಣ ಪ್ರಮಾಣ ಪತ್ರ ನನ್ನ ಬಳಿ ಇಲ್ಲ. ಈಗ ದಾವ ಆಸ್ತಿ ಪ್ರತಿವಾದಿ ನಂ.1(ಎ), 2, 3(ಎ) ರವರ ಹೆಸರಿಗೆ ಇದೆ. ವಾದಿ ಮತ್ತು ಪ್ರತಿವಾದಿ ತಾಯಿ ಶಿವಮ್ಮ ಜೀವಂತ ಇದ್ದಾಗ ಮ್ಯುಟೇಷನ್ ಆಗಿದೆ ಎಂದರೆ ಸರಿಯಲ್ಲ. ಮ್ಯುಟೇಷನ್, ವಿಭಾಗ ಆದಾಗ ವಾದಿಯವರು ತಕರಾರು ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯವರು ಅವರ ತಂದೆ ಜೀವಂತ ಇರುವಾಗ ಬಂಗಾರ ಮತ್ತು ಹಣ ನೀಡಿ ಅವರ ಹಿಸ್ಸೆಯ ಬದಲಾಗಿ ನೀಡಲಾಗಿದೆ ಎಂದರೆ ಸರಿಯಲ್ಲ. ಅವರ ತಂದೆಯ ಕಾಲಕ್ಕೆ ಮೊದಲು ವಿಭಾಗ ಆಗಿದೆ ಎಂದರೆ ಸರಿಯಲ್ಲ. ವಾದಿಯವರು ಅವರ ತಂದೆ ಮತ್ತು ತಾಯಿ ಇರುವಾಗ ಪಾಲು ಕೇಳಿಲ್ಲ ಎಂದರೆ ಸರಿ. ಈಗ ದಾವಾ ಆಸ್ತಿ ಪ್ರಸ್ತುತ ಎಕರೆಗೆ ರೂ.18,00,000/- ಬೆಲೆ ಇದ್ದ ಕಾರಣ ಅವರ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಯವರ ಮನೆ ಇರುವ ಊರಿಗೆ ಹೋಗಿ ಬಂದಿದ್ದೇನೆ ಎಂದರೆ ಸರಿಯಲ್ಲ. ವಾದಿಯವರು ಹಣ

ಮತ್ತು ಬಂಗಾರ ಪಡೆದರೂ ಸಹ ಹೇಗಾದರೂ ಮಾಡಿ ಆಸ್ತಿ ಪಡೆಯಬೇಕೆಂದು ಸುಳ್ಳು ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಪಂಚಾಯಿತಿ ಯಾವ ದಿನಾಂಕದಂದು ಆಯಿತು ಎಂದರೆ ಗೊತ್ತಿಲ್ಲ. ವಾದಿಯವರ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಇವತ್ತು ಬೇರೆಯ ಕೇಸಿನಲ್ಲಿ ಸಾಕ್ಷಿ ಹೇಳುತಿತದ್ದೇನೆ ಎಂದರೆ ಸರಿಯಲ್ಲ. ಓ ಎಸ್ ನಂ. 83/24 ಕೇಸಿನಲ್ಲಿ ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿ. ನಾನು ಯಾವುದೇ ವಕಾಲತನ್ನು ಮಾಡುವುದಿಲ್ಲ ಮತ್ತು ದಲ್ಲಾಳಿತನ ಮಾಡುತ್ತೇನೆ ಎಂದರೆ ಸರಿಯಲ್ಲ. ನಾನು ಪಕ್ಷಗಾರರನ್ನು ಮನೆಗೆ ಕರೆಯಿಸಿ ಸುಳ್ಳು ದಾವೆ ಮಾಡಿಸುತ್ತೇನೆ ಎಂದರೆ ಸರಿಯಲ್ಲ. ಅವರ ತಾಯಿ ಇದ್ದಾಗ ನೊಂದಾಯಿತ ವಿಭಾಗ ಪತ್ರ ಆಗಿದೆ ಎಂದರೆ ಸರಿ. ವಾದಿಯವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನಗೆ ದಾವೆಯ ಸಂಗತಿ ಯಾವುದು ಗೊತ್ತಿಲ್ಲ ಎಂದರೆ ಸರಿಯಲ್ಲ. ಪಂಚಾಯಿತಿಯನ್ನು ನಾನು ಒಬ್ಬನೇ ಮಾಡಿದ್ದೇನೆ. ವಾದಿಯವರು ತಮ್ಮ ಪಾಲನ್ನು ತೆಗೆದುಕೊಂಡು ಹೋಗಿದ್ದಾರೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**